ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಸಿಲ್ಕ್ ಫಿಲೇಚರ್ ಕೇಂದ್ರವನ್ನು ಏರ್ಪಡಿಸುತ್ತಾರೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಸಿಲ್ಕ್ ಫಿಲೇಚರ್ ಕೇಂದ್ರಗಳನ್ನು ಏರ್ಪಡಿಸದೆ ಇರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಭಾಗದಲ್ಲಿ ದೇವನಹಳ್ಳಿ ಸಿಲ್ಕ್ ಫಿಲೇಚರ್ ಫ್ಯಾಕ್ಟರಿ ಇದೆ. ಅಲ್ಲಿಯೂ ಕೂಡ ಪೂರ್ತಿ ಕೆಲಸ ನಡೆಯುತ್ತಿದೆ. ಆದ್ದರಿಂದ ಇನ್ನೂ ಹತ್ತಿರ ಏರ್ಪಾಡು ಮಾಡುವುದರಿಂದ ಕಷ್ಟವಾಗುತ್ತದೆ.

ಶ್ರೀ ಜಿ. ಪಾಪಣ್ಣ.—ಈಗಿರುವ Silk filature ವಿಷಯದಲ್ಲಿ ಸರಕಾರ ಅನುಸರಿಸುವ ರೀತಿ ನೋಡಿದರೆ, ಹೊಸದಾಗಿ ಸ್ಥಾಪಿಸುತ್ತಾ ಇರುವುದು ಅನುಕೂಲವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೆಲ್ಲಾ ಯೋಚನೆ ಮಾಡಿದೆ.

Hattikere village tank, Madabalu Hobli in Magadi Taluk (construction).

Q.—611. Sri S. SIDDAPPA (Magadi).—

Will the Government be pleased to state :—

(*a*) the estimated cost of constructing the Hattikere village tank, Madabalu Hobli in Magadi Taluk ;

(*b*) when the work will be completed ?

A.—Sri. H. M. CHANNABASAPPA (Minister for Industries).—

(*a*) Rs. 18,500.

(*b*) Soon after the estimate is sanctioned.

ಶ್ರೀ ಎಸ್. ಸಿದ್ದಪ್ಪ.—ಅಂದಾಜು ಯಾವಾಗ ಮಂಜೂರು ಆಗುತ್ತದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—Irrigation enquiryಗೆ ಹೋಗಿದೆ. ಅದು ಬಂದ ಮೇಲೆ ಮಂಜೂರು ಮಾಡುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಅಂದಾಜು ಯಾವಾಗ ತಯಾರಾಯಿತು?

ಶ್ರೀ ಎಚ್. ಎಂ. ಚನ್ನಬಸಪ್ಪ.—1951 ನೇ ಇಸವಿಯಲ್ಲಿ ತಯಾರಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಮಂಜೂರು ಆಗಬೇಕಾದರೆ ಮೂರು ವರ್ಷಗಳು ಬೇಕಾಯಿತೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—Delay ಮಾಡಿದ್ದಕ್ಕೋಸ್ಕರ ಸಂಬಂಧಪಟ್ಟ ಅಧಿಕಾರಿಗಳ explanation call for ಮಾಡಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಆದಷ್ಟು ಜಾಗ್ರತೆ ಮಾಡಿಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—Irrigation enquiry ಆದ ಕೂಡಲೇ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅಂದಾಜು ಮಂಜೂರು ಪೂರ್ತಿಯಾದ ಕೂಡಲೇ ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಕೆಲಸವನ್ನು ತೆಗೆದುಕೊಳ್ಳುತ್ತೇವೆ.

QUESTIONS FOR ANSWERS ON THE DAY

(but not taken up).

Mining Leases

Q.—242. Sri A. BHEEMAPPA NAIK (Molakalmuru).—

Will the Government be pleased to state :—

(*a*) the number of mining leases applied for in Mysore State from 1st June 1955 ;

(*b*) the dates on which they were applied for ;

(*c*) the dates on which they were granted ;

(*d*) the number rejected and the reason for such rejection ?

A.—Sri H. M. CHANNABASAPPA (Minister for Industries).—

(*a*) 70.

(*b*) and (*c*) *Vide* Statement appended below.

(*d*) None.